C.R.P.67

Form No.4 (Civil)
Deposition Sheets
(R.P.No.57)

# 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

## ಎಸ್ ಸಿ ಸಂಖ್ಯೆಃ 296/2018

**ಪ್ರಾಸಾ.26 ಚಾಸಾ.10**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಸೈಯದ್ ಅಜ್ಮತ್ ಅಲಿ |
| **ತಂದೆ ಹೆಸರು** | : | ಸೈಯದ್ ಅಲಿಜಾನ್ |
| **ವಯಸ್ಸು** | : | 40 ವರ್ಷಗಳು |
| **ಉದ್ಯೋಗ** | : | ಆಟೋ ಚಾಲಕ |
| **ವಾಸ** | : | ಹೊಸಕೋಟೆ. |

## ಪ್ರಮಾಣ ವಚನ ಬೋಧಿಸಿದ ದಿನಾಂಕಃ 15.03.2023

## ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ನನಗೆ ಚಾಸಾ-8 ಗೊತ್ತು. ಚಾಸಾ-9 ಗೊತ್ತಿಲ್ಲ. ಚಾಸಾ-8 ಲೋಕೇಶ್ ನನ್ನ ಸ್ನೇಹಿತ. ಆತ ಮೃತಪಟ್ಟಿರುತ್ತಾನೆ. ಈಗ ತೋರಿಸಿದ ನಿಶಾನೆ ಪಿ-14 ರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-14(ಬಿ) ಎಂದು ಗುರುತಿಸಲಾಯಿತು.

2. ಸುಮಾರು 4-5 ವರ್ಷಗಳ ಹಿಂದೆ ಚಾಸಾ-8 ರವರ ಮನೆಯ ಹತ್ತಿರ ಇರುವ

ಹೊಟೇಲಿನಲ್ಲಿ ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ಚಾಸಾ-8 ರವರು ಸಹಿ ಮಾಡಲು ಹೇಳಿದ್ದರಿಂದ ನಾನು ನಿಶಾನೆ ಪಿ-14 ಕ್ಕೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ಚಾಸಾ-8 ಲೋಕೇಶ್ ರವರ ತಂಗಿ ಕೊಲೆ ಆಗಿರುವ ವಿಚಾರದಲ್ಲಿ ಪೊಲೀಸರವರು ಸದರಿ ಹೋಟೆಲ್ ನ ಹತ್ತಿರ ಬಂದಿದ್ದರು. ನಾನು ಲೋಕೇಶ್ ನನ್ನು ಮಾತನಾಡಿಸಿಕೊಂಡು ಬರಲು ಹೊಟೇಲಿ ನ ಹತ್ತಿರ ಹೋಗಿದ್ದಾಗ ಪೊಲೀಸರವರು ಸದರಿ ದಾಖಲೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

## ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

1. ದಿನಾಂಕ 18.11.2017 ರಂದು ಹೊಸಕೋಟೆ ತಾಲ್ಲೂಕು ಚಿಕ್ಕೊಂಡಹಳ್ಳಿ ಗ್ರಾಮಕ್ಕೆ ಸೇರಿದ ನಂ.146 ಜಮೀನಿನಲ್ಲಿದ್ದ ಕವಿತಾ ಫ್ಯಾಮಿಲಿ ಡಾಬಾಕ್ಕೆ ಪೊಲೀಸರು ನನ್ನನ್ನು ಕರೆಸಿದ್ದರು, ಆಗ ಪ್ರತ್ಯೇಕ ಸಾಕ್ಷಿಯಾದ ಚಾಸಾ-8 ಲೋಕೇಶ್ ಹಾಜರಿದ್ದು,ಚಾಸಾ-8 ರವರೇ ಘಟನೆ ನಡೆದ ಸ್ದಳವನ್ನು ತೋರಿಸಿದ ಮೇರೆಗೆ ಪೊಲೀಸರವರು ಸದರಿ ಸ್ಥಳದಲ್ಲಿ ಬೆಳಗ್ಗೆ 12.00 ರಿಂದ 12.30 ಗಂಟೆಯವರೆಗೆ

ನಿಶಾನೆ ಪಿ-14 ರಂತೆ ಮಹಜರ್ ಕ್ರಮ ಜರುಗಿಸಿ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ ಸದರಿ ಸ್ಥಳದಲ್ಲಿ ಪೊಲೀಸರು ನನ್ನ ಸಮಕ್ಷಮ ಸ್ಥಳದಲ್ಲಿ ನೆಲದ ಮೇಲೆ ಬಿದ್ದು ಒಣಗಿರುವ ರಕ್ತವನ್ನು ಪರೀಕ್ಷೆಗೆ ಕಳುಹಿಸುವ ಸಲುವಾಗಿ ಪ್ಲಾಸ್ಟಿಕ್ ಬಾಟಲ್ ನಲ್ಲಿ ಶೇಖರಿಸಿದರು ಎಂದರೆ ಸರಿಯಲ್ಲ. ಅದೇ ರೀತಿ ಪೊಲೀಸರು ಸ್ಥಳದಿಂದ ಮಾದರಿ ಮಣ್ಣನ್ನು ಸಹ ಒಂದು ಪ್ಲಾಸ್ಟಿಕ್ ಬಾಟಲ್ ನಲ್ಲಿ ಶೇಖರಿಸಿದರು ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಸೀಲ್ ಮಾಡಿ, ಸ್ಯಾಂಪಲ್ ಸೀಲ್ ಪಂಚರಲ್ಲಿ ಒಬ್ಬರಾದ ವೆಂಕಟರಮಣಪ್ಪರವರ ವಶಕ್ಕೆ ಕೊಟ್ಟು, ನ್ಯಾಯಾಲಯದ ವಿಚಾರಣ ಕಾಲದಲ್ಲಿ ಸೀಲ್ ನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ತಿಳಿಸಿದರು ಎಂದರೆ ಸರಿಯಲ್ಲ.

2. ಪೊಲೀಸರವರು ಸದರಿ ಡಾಬಾದ ಮುಂಭಾಗದ ಹೊರಾಂಡದಲ್ಲಿ ಬಿದ್ದಿದ್ದ ಸಿಸಿಟಿವಿ ಕವರ್ ಗೆ ಅಳವಡಿಸಿದ ಬಿಳಿ ಬಣ್ಣದ ಪ್ಲಾಸ್ಟಿಕ್ ಸೇಫ್ಟಿ ಗಾರ್ಡ್, ಮಣ್ಣಿನ ಡಿಸೈನ್ ಹೊಡೆದಿರುವ ಗಂಟೆಗಳನ್ನು ಹಾಗೂ ಸೀಲು ಮಾಡಿಕೊಂಡ ಪ್ಲಾಸ್ಟಿಕ್ ಡಬ್ಬಗಳನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಾನು ಆ ದಿವಸ ಸ್ಥಳದಲ್ಲಿ ಹಾಜರಿದ್ದು, ನಾನು ಸ್ಥಳದಲ್ಲಿಯೇ ಸಹಿ ಮಾಡಿ ಮತ್ತು ನನ್ನ ಸಮಕ್ಷಮ ಸದರಿ ವಸ್ತುಗಳನ್ನು ಅಮಾನತುಪಡಿಸಿಕೊಂಡಿದ್ದರು ಸಹ ನಾನು ಈ ದಿವಸ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಮ್.ಪಿ. ವಕೀಲರಿಂದ ಆರೋಪಿತರ ಪರವಾಗಿಃ**

ಶ್ರೀ ಎಮ್.ಪಿ. ವಕೀಲರು ಹಾಜರಿದ್ದು ತಮ್ಮದು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಿದ್ದಾರೆ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.